ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿರತಕ್ಕ ರಿಜಿಸ್ಟ್ರರ್ಸ್ ನಿಂದ ಅವರು ಕೊಟ್ಟಿರುವ ಪ್ರಕಾರ ಸಮಾಚಾರ ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಅಲ್ಲಿಯ ಆಫೀಸಿನಲ್ಲಿ ಕಾಗದ ಪತ್ರಗಳನ್ನು ಸರಿಯಾಗಿ ಇಡದೇ ಇರುವುದಕ್ಕೆ ಇದೊಂದು ನಿದರ್ಶನವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಅಧಿಕಾರಿಗಳು ಸರಿಯಾಗಿ ಕೆಲಸಮಾಡದಿರುವುದೇ ಇದಕ್ಕೆ ಕಾರಣವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಒಂದು ಕಾರಣ ದಿಂದಲೇ ಅಧಿಕಾರಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಇವರು ರೈತರ ಅಹವಾಲು ಗಳನ್ನು ಸರಿಯಾಗಿ ವಿಚಾರಮಾಡುತ್ತಿಲ್ಲವೆಂದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಜಿ.ಎಂ.ಎಫ್. ಸ್ಕೀಮಿನಲ್ಲಿ ಮಂಜೂರುಮಾಡಿಕೊಟ್ಟ ಜಮೀನನ್ನು ಸರ್ಕಾರದವರು ವಾಪಸು ಕೊಡಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri KADIDAL MANJAPPA.—That is a general question not arising out of this particular question.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳುತ್ತಿರುವುದೂ ಈ ಶಿಡ್ಲಘಟ್ಟ ತಾಲ್ಲೂಕಿಗೆ ಸಂಬಂಧಪಟ್ಟದ್ದರ ತಕ್ಕದ್ದೇ ಆಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

---

*Rainfall in Gundlupet Taluk.*

*Q.*—491. Sri SIDDIAH *alias* KUNNIAH (Gudlupet—Heggaddevankote—Scheduled Castes).—

Will the Government be pleased to state :—

the number of inches of rainfall in Gundlupet Taluk each year from 1937 up to the end of 1952 ?

*A.*—Sri KADIDAL MANJAPPA (Minister for Revenue and Public Works).—

(*a*) Statement showing the number of inches of rainfall in Gundlupet Taluk each year from 1937 to end of 1952.

| *Name of the Station* | 1937 | 1938 | 1939 | 1940 |
|---|---|---|---|---|
| 1 | 2 | 3 | 4 | 5 |
| Gundlupet .. | 35.00 | 17.08 | 28.87 | 28.10 |
| Begur .. | 37.63 | 14.88 | 14.08 | 24.31 |
| Bhandipur .. | 52.25 | 23.97 | 40.11 | 42.08 |

| *Name of the Station* | 1941 | 1952 | 1943 | 1944 |
|---|---|---|---|---|
| | 6 | 7 | 8 | 9 |
| Gundlupet .. | 27.09 | 27.71 | 24.95 | 36.35 |
| Begur .. | 24.87 | 30.98 | 27.84 | 27.34 |
| Bhandipur .. | 37.32 | 31.56 | 45.51 | 35.10 |

| *Name of the Station* | 1945 | 1946 | 1947 | 1948 |
|---|---|---|---|---|
| | 10 | 11 | 12 | 13 |
| Gundlupet .. | 29.45 | 41.69 | 15.47 | 25.31 |
| Begur .. | 27.73 | 26.48 | 14.64 | 13.76 |
| Bhandipur .. | 31.57 | 47.20 | 31.27 | 37.02 |

| *Name of the Station* | 1949 | 1950 | 1951 | 1952 |
|---|---|---|---|---|
| | 14 | 15 | 16 | 17 |
| Gundlupet .. | 27.05 | 14.62 | 29.18 | 23.96 |
| Begur .. | 12.56 | 12.24 | 23.26 | 16.19 |
| Bhandipur .. | 34.11 | 30.72 | 29.86 | 26.13 |

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—1937ರಿಂದ 1952ರವರೆಗೂ ಮಳೆ ಕಮ್ಮಿಯಾಗಿದ್ದರೆ ಬೆಳೆ ಹೇಗೆ ಆಗುತ್ತದೆ ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ನುಳೆಯ ನೀರಿನ ಭಾವಿಗಳ ಮತ್ತು ಕೆರೆಗಳ ಸಹಾಯದಿಂದ ಬೆಳೆಗಳಾಗುತ್ತವೆ.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಮಳೆಯೇ ಬಾರದಿದ್ದಾಗ, ಖುಷ್ಕಿ ಜಮೀನಿನಲ್ಲಿ ಕೂಡ ಬೆಳೆಯಾಗದಿರುವಾಗ ಬಾವಿ, ಹಳ್ಳ, ಮತ್ತು ಕೆರೆಗಳಲ್ಲಿ ನೀರೆಲ್ಲಿರುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳುತ್ತಿರುವುದು ಬಹಳ ಜನರರ್ ಪ್ರಶ್ನೆಯಾಯಿತು. ಮಳೆಬಾರದಿರುವುದಕ್ಕೆ ಸರ್ಕಾರದವರೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದಯ್ಯ ಉರುಫ್ ಕುನ್ನಯ್ಯ.—ಶ್ಯಾನುಭೋಗರುಗಳು ಮನೆಯಲ್ಲೇ ಕುಳಿತುಕೊಂಡು ಜಮೀನುಗಳ ಪರಿಸ್ಥಿತಿಯನ್ನು ಪರಿಶೀಲನೆಮಾಡದೆ ಕುಳವಾಡಿಗಳಿಂದ ಬಾತ್ಮಿ ತೆಗೆದುಕೊಂಡು ಜಮೀನಿನಲ್ಲಿ ಬೆಳೆಯಾಗಿರುತ್ತದೆಂದು ವರದಿ ಕಳುಹಿಸುತ್ತಾರೆ. ಆದರೆ ಜಮೀನಿನಲ್ಲಿ ಬೆಳೆಯೇ ಆಗಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ರೈತರಿಗೆ ಕಂದಾಯ ರೆಮಿಷ್ಷನ್ ಕೊಡದಿದ್ದರೆ ಅವರು ಹೇಗೆ ಬದುಕುವುದಕ್ಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆಯಾಗದೆ ಬೆಳೆಯಾಗದಿದ್ದರೆ ಅಂಥ ಕಡೆಗಳಲ್ಲಿ ಕಂದಾಯ ರಿಯಾಯಿತಿಯನ್ನೂ ಸರ್ಕಾರದವರು ಕೊಡುತ್ತಲೇ ಇದ್ದಾರೆ. ಹಾಗೆ ಮಳೆಬೆಳೆಯಾಗದ ಕಡೆಗಳಲ್ಲಿ ರೆಮಿಷ್ಷನ್ ಮಾಡದಿರುವ ಸಂದರ್ಭಗಳಿದ್ದರೆ ನನ್ನ ಗಮನಕ್ಕೆ ತಾವು ತರಬಹುದು. ಆ ಬಗ್ಗೆ ನೂಕ್ತ ಕ್ರಮವನ್ನು ಕೈಕೊಳ್ಳಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ತಾಲ್ಲೂಕಿನ ವಿಚಾರವಾಗಿ ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಕೆ. ಸಿ. ರೆಡ್ಡಿಯವರು ಮೈಸೂರು ಸರ್ಕಾರಕ್ಕೆ ವರದಿ ಮಾಡಿಲ್ಲವೇ ?

Mr. SPEAKER.—That is already answered. On the 3rd or 4th day it was answered.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇಲ್ಲಿ ಕೊಟ್ಟಿರತಕ್ಕ ತಃಖ್ತೆಯಲ್ಲಿ ಮಳೆ ಕಡಮೆಯಾಗಿರುತ್ತದೆಯೆಂಬುದು ತಪುಗೆ ಗೊತ್ತಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸಕಾಲದಲ್ಲಿ ಮಳೆ ಬಂದಿರುವುದಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಸಕಾಲದಲ್ಲಿ ಮಳೆ ಬಾರದಿರುವುದು ನಿಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲೊಂದರಲ್ಲೇ ಅಲ್ಲ. ನಂಸ್ಥಾನದ ನಾನಾ ಪ್ರದೇಶಗಳಲ್ಲಿ ಹಾಗೆ ಆಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕಂದಾಯ ರಿಯಾಯಿತಿಗಳನ್ನು ಇಂಥ ಕಡೆಗಳಿಗೆ ಕೊಡತಕ್ಕದ್ದು ಸೂಕ್ತವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಳೆ ಬಾರದಿರುವುದು ಒಂದೇ ಕಾರಣವಲ್ಲ. ಬೆಳೆಯಾಗದಿದ್ದರೆ ಮಾತ್ರ ಕಂದಾಯ ರಿಮಿಷ್ಷನ್ ಕೊಡಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡಿಸ್ಟ್ರೆಸ್ ಏರಿಯಾಕ್ಕೆ ರಿಯಾಯ್ತಿ ಕೊಡಬಾರದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕ ಡಿಸ್ಟ್ರೆಸ್ ಏರಿಯಾಗಳಲ್ಲಿ ಕೆರೆಗೆ ನೀರು ಬಂದು ಬೆಳೆಗಳಾಗಿವೆ, ಅಂಥ ಸಂದರ್ಭಗಳೂ ಇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮಳೆಯೂ ಆಗದೆ ಕೆರೆಗೆ ನೀರೂ ಬಾರದಂಥ ಡಿಸ್ಟ್ರೆಸ್ ಏರಿಯಾಕ್ಕೆ ತಾವು ಕಂದಾಯದ ರಿಯಾಯಿತಿ ಕೊಡುವಿರಾ ?

Sri KADIDAL MANJAPPA.—Yes. As per rules.

ಶ್ರೀ ಮುದ್ದು ರಾಮಯ್ಯ.—ಹಾಗೆ ಮಳೆ ಬಾರದಿದ್ದಾಗ ಪಶ್ಚಿಮ ಘಟ್ಟಗಳ ಕಡೆಯಿಂದ ಬರುವ ಮೋಡಗಳಿಗೆ ಆಟಂಬಾಂಬ್ ಹಾಕಿ ಮಳೆ ಬರಿಸಲು ಸಾಧ್ಯವೆಂದು ಶಾಸ್ತ್ರಜ್ಞರು ತಿಳಿಸಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವೇನಾದರೂ ಹಾಗೆ ರಿಸರ್ಚ್ ಮಾಡಿ ಒಂದು ಸ್ಕೀಮನ್ನು ತಂದರೆ ಅನಂತರ ನಾವು ಅನುಕೂಲಮಾಡಬಹುದು.

ಶ್ರೀ ಯು. ಎಂ. ಮಾದಪ್ಪ.—ಈ ಪ್ರದೇಶದಲ್ಲಿ ಮಳೆಯಾಗದಿರುವುದಕ್ಕೆ ಬಂಡೀಪುರ ಮತ್ತು ಹೆಗ್ಗಡದೇವನ ಕೋಟೆಯ ಕಾಡುಗಳು ಹಾಳಾಗಿರುವುದೇ ಕಾರಣವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದೂ ಒಂದು ಕಾರಣ ಎನಬಹುದು.

ಶ್ರೀ ಯು. ಎಂ. ಮಾದಪ್ಪ.—ಭೂಗೋಳಶಾಸ್ತ್ರಜ್ಞರೂ ಮತ್ತು ಖಗೋಳ ಶಾಸ್ತ್ರಜ್ಞರೂ ಕಾಡುಗಳನ್ನು ಸರಿಯಾಗಿ ಅಭಿವೃದ್ಧಿಮಾಡಬೇಕೆಂದು ಹೇಳಿರುವುದೇ ಹೀಗೆ ಮಳೆ ಬಾರದಿರುವುದಕ್ಕೆ ಕಾರಣವೆಂದು ಹೇಳಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಎರಡು ಮೂರು ಸಿದ್ಧಾಂತಗಳಿರುತ್ತವೆ.

ಶ್ರೀ ಯು. ಎಂ. ಮಾದಪ್ಪ.—ಈ ಕಾಡುಗಳ ಅಭಿವೃದ್ಧಿಗೆ ತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತಲೇ ಇದ್ದೇವೆ.

---

## *Famine Measures in Madhugiri Sub-Division.*

*Q.*—575. SRI MUDDU RAMIAH (Kortagere-Madhugiri).—

Will the Government be pleased to state :—

(*a*) whether it has come to their notice that Madhugiri Sub Division is often facing famine conditions ;

(*b*) the action taken by them to permanently prevent the occurrence of famine in this area ?

*A.*—Sri KADIDAL MANJAPPA (Minister for Revenue and Public Works).—

(*a*) Yes.

(*b*) Works of a relative abiding nature like the desilting of tank beds, tank restorations, improvement of feeder channels, well subsidy for sinking irrigation wells and above all, electricity for pumping water form wells and water reservoirs have been taken up.

ಶ್ರೀ ಮುದ್ದು ರಾಮಯ್ಯ.—ಶ್ರೀ ಎಸ್. ವಿ. ರಾಮಮೂರ್ತಿ ಸಮಿತಿಯವರು ನಮ್ಮ ಮಧುಗಿರಿ ಪ್ರಾಂತದಲ್ಲಿ ಪ್ರವಾಸಮಾಡಿರುತ್ತೀರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಮಾಡಿರುತ್ತಾರೆ.

ಶ್ರೀ ಮುದ್ದು ರಾಮಯ್ಯ.—ನಮ್ಮ ಸರ್ಕಾರಕ್ಕೇನು ಶಿಫಾರ್ಸು ಮಾಡಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಕೇಂದ್ರ ಸರ್ಕಾರಕ್ಕೆ ಅವರ ಶಿಫಾರ್ಸುಗಳನ್ನು ಕಳುಹಿಸಿದ್ದಾರೆ. ಆ ಬಗ್ಗೆ ನಮಗೆ ಇನ್ನೂ ಯಾವ ರಿಪೋರ್ಟೂ ಬಂದಿಲ್ಲ.

ಶ್ರೀ ಮುದ್ದು ರಾಮಯ್ಯ.—ಪಂಚವಾರ್ಷಿಕ ಯೋಜನೆ ಬಗ್ಗೆ ಈ ಪ್ರಾಂತದಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುದ್ದು ರಾಮಯ್ಯ.—ಹೊಸ ಹೊಸ ಯೋಜನೆಗಳನ್ನು ಕೈಕೊಳ್ಳಲು ಸಾಧ್ಯವಿದ್ದರೆ ಕೈಕೊಳ್ಳುತ್ತೇವೆಂದು ತಿಳಿಸಿದ್ದೀರಿ. ಯಾವ ಯಾವುದಕ್ಕೆ ಎಷ್ಟೆಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುದ್ದು ರಾಮಯ್ಯ.—ಕ್ಷಾಮಪೀಡಿತ ಪ್ರದೇಶಗಳಿಗೆ ಹೆಚ್ಚಿಗೆ ಗಮನಕೊಡಲಾಗುತ್ತಿದೆಯೆಂದು ಹೇಳುತ್ತಿರುವಾಗ ಸರ್ಕಾರದವರು ಈ ಕ್ಷಾಮಪೀಡಿತ ಪ್ರದೇಶಕ್ಕೆ ಅಂಥಾ ಗಮನಕೊಡುತ್ತಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿಯೇ ತುಮಕೂರು ಜಿಲ್ಲೆಗೆ 9 ಲಕ್ಷ ಚಿಲ್ಲರೆ ಹೊಲಗಳನ್ನೊದಗಿಸಿರುವುದು. ಆದರೆ ತಾಲ್ಲೂಕ್‌ವಾರ್ ವಿವರಗಳು ಈಗ ಸದ್ಯಕ್ಕೆ ನನ್ನಲ್ಲಿಲ್ಲ.

ಶ್ರೀ ಮುದ್ದು ರಾಮಯ್ಯ.—ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ 50 ಲಕ್ಷ ರೂಪಾಯಿಗಳ ಗ್ಯಾರಂಟಿನಲ್ಲಿ ಮಧುಗಿರಿ ತಾಲ್ಲೂಕಿಗೆ ಎಷ್ಟನ್ನು ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಹಂಚಿಕೆಯ ಜಪಾಬ್ದಾರಿಯನ್ನೆಲ್ಲಾ ವಿದ್ಯುಚ್ಛಕ್ತಿ ಇಲಾಖೆಗೆ ಒಪ್ಪಿಸಿದ್ದೇವೆ.